ವೃತ್ತಿ ನಾಟಕ ಕಂಪನಿಗಳಲ್ಲಿ ಅಭಿನಯಿಸಬೇಕಾದರೆ ಸಂಗೀತ ಜ್ಞಾನ, ಗಾಯನ ಕಲೆ ಗೊತ್ತಿರಲೇಬೇಕು ಎನ್ನುವ ಕಾಲದಲ್ಲಿ ಬಣ್ಣದ ಬದುಕಿಗೆ ಕಾಲಿಟ್ಟವರು ವೀರಪ್ಪ. ತಂದೆಯ ಕಂಪನಿಯಲ್ಲಿದ್ದ ನಾಗೇಶರಾಯರು, ಬಿ. ರಾಚಪ್ಪ ಅವರಂತಹ ಸಂಗೀತಗಾರರಿಂದ ತರಬೇತಿ ಪಡೆದರು.

ತಂದೆಯ ರಂಗ ಸಂಸ್ಥೆಯ ಬಹುತೇಕ ನಾಟಕಗಳಲ್ಲಿ ಪ್ರಧಾನ ಪಾತ್ರಧಾರಿಯಾಗಿರುತ್ತಿದ್ದ ವೀರಪ್ಪ, ಇಡೀ ನಾಟಕದ ಸೂತ್ರಧಾರಿಯಂತೆ ಪಾತ್ರ ನಿರ್ವಹಿಸುವುದನ್ನು ಕರಗತ ಮಾಡಿಕೊಂಡರು. ತೀಕ್ಷ್ಣ ಮಾತುಗಳು, ಸುಶ್ರಾವ್ಯ ಸಂಗೀತದ ಮೂಲಕ ಪ್ರೇಕ್ಷಕರನ್ನು ರಂಜಿಸುವುದರಲ್ಲಿ ಯಾವಾಗಲೂ ಮುಂದಿರುತ್ತಿದ್ದರು.

ಬಹುತೇಕ ವೃತ್ತಿ ಕಂಪನಿಗಳಲ್ಲಿ ಪೌರಾಣಿಕ ನಾಟಕಗಳೇ ಜೀವಾಳವಾಗಿದ್ದ ಕಾಲವದು. ಶಾಂತವೀರಪ್ಪನವರ ಕಂಪನಿಯೂ ಇದಕ್ಕೆ ಹೊರತಾಗಿರಲಿಲ್ಲ. ‘ಶಾಕುಂತಲ’, ‘ಲಂಕಾದಹನ’ದಂತಹ ಪ್ರಮುಖ ಪೌರಾಣಿಕ ನಾಟಕಗಳಲ್ಲಿ ವೀರಪ್ಪನವರಿಗೆ ಪ್ರಮುಖ ಪಾತ್ರ ಇರುತ್ತಿತ್ತು. ಶ್ರೀರಾಮ ಹಾಗೂ ಹನುಮನ ಪಾತ್ರಗಳೆರಡನ್ನೂ ಲೀಲಾಜಾಲವಾಗಿ ನಿರ್ವಹಿಸುತ್ತಿದ್ದರು. ದುಷ್ಯಂತನಾಗಿ, ‘ಸತ್ಯ ಹರಿಚಂದ್ರ’ ನಾಟಕದಲ್ಲಿ ಸ್ಮಶಾನ ಕಾಯುವ ವೀರಬಾಹುವಾಗಿ, ‘ಕೃಷ್ಣ ಲೀಲಾ’ದಲ್ಲಿ ನಾರದನಾಗಿ ಪ್ರೇಕ್ಷಕರ ಗಮನ ಸೆಳೆದರು. ಅವರಿಗೆ ಹೆಚ್ಚು ಜನಮನ್ನಣೆ ತಂದು ಕೊಟ್ಟ ಪಾತ್ರ ಟಿಪ್ಪು ಸುಲ್ತಾನ.

ಮುಂದೆ ತಾವೇ ಸ್ವಂತ ನಾಟಕ ಕಂಪನಿಯೊಂದನ್ನು ಆರಂಭಿಸಿದರು. ಕಂಪನಿ ಮಾಲೀಕರಾಗಿ ಜವಾಬ್ದಾರಿಗಳು ಹೆಚ್ಚಿದರೂ ಅವರು ಅಭಿನಯವನ್ನು ಕೈಬಿಡಲಿಲ್ಲ. ತಮ್ಮ ಕಂಪನಿಯಲ್ಲಿ ಪೌರಾಣಿಕ ನಾಟಕಗಳ ಜೊತೆಗೇ ಜಾನಪದ ಹಾಗೂ ಸಾಮಾಜಿಕ ನಾಟಕಗಳ ಪ್ರಯೋಗಗಳಿಗೆ ಮುನ್ನುಡಿ ಬರೆದರು. ಜಾನಪದ ನಾಟಕ ‘ಗುಣಸಾಗರಿ’, ಸಾಮಾಜಿಕ ನಾಟಕ ‘ಹಳ್ಳಿ ಹುಡುಗಿ’ ಇಂತಹ ಪ್ರಯೋಗಗಳ ಉದಾಹರಣೆಗಳಾಗಿವೆ. ಸಮಕಾಲೀನ ಸಂಗತಿಗಳನ್ನು ನಾಟಕಗಳಲ್ಲಿ ತಂದರು. ಅವುಗಳಿಗೆ ಪೂರಕವಾಗಿ ವಚನಗಳನ್ನು ಸೇರಿಸುತ್ತಿದ್ದರು. ಸಾಮಾನ್ಯರಿಗೂ ಅರ್ಥವಾಗುವಂತಹ ಕನಕ–ಪುರಂದರ ದಾಸರ ಕೀರ್ತನೆಗಳನ್ನು ಸಾಂದರ್ಭಿಕವಾಗಿ ಹಾಡುತ್ತಿದ್ದರು. ನಾಟಕದ ಪ್ರಸಂಗಗಳಲ್ಲಿ ತತ್ತ್ವಪದಗಳನ್ನೂ ಪೋಣಿಸುತ್ತಿದ್ದರು. ಹೀಗೆ ಕೆ.ಬಿ.ಆರ್. ಕಂಪನಿ ಅಂದಿನ ಪ್ರಮುಖ ನಾಟಕ ಕಂಪನಿಯಾಗಿ ಗುರುತಿಸಿಕೊಂಡಿತ್ತು.

ರಂಗದ ಮೇಲೆ ನಾಯಕನಾಗಿ ಮಿಂಚುವುದಷ್ಟೇ ಅಲ್ಲ, ಉತ್ತಮ ಸಂಘಟಕರಾಗಿಯೂ ಅವರು ಕೆಲಸ ಮಾಡಿದರು. ಕನ್ನಡ ಹೋರಾಟಗಾರ ವಾಟಾಳ್ ನಾಗರಾಜ್ ಹಾಗೂ ಕಲಾವಿದೆ ಬಿ. ಜಯಶ್ರೀ ಅವರೊಂದಿಗೆ ಕೋಲಾರ ಜಿಲ್ಲೆಯಲ್ಲಿ 1980ರಲ್ಲಿ ಪ್ರಥಮ ಕನ್ನಡ ವೃತ್ತಿ ರಂಗಕಲಾವಿದರ ಸಮ್ಮೇಳನವನ್ನು ಆಯೋಜಿಸಿ ಸೈ ಎನಿಸಿಕೊಂಡರು.

ಯಶಸ್ವಿ ರಂಗಕಲಾವಿದರಾಗಿ ಬಾಳಿದ ವೀರಪ್ಪ, ಪ್ರೇಕ್ಷಕರನ್ನು ರಂಜಿಸುವ ಕಲಾವಿದರ ನಿವೃತ್ತಿ ಬದುಕಿಗೆ ಮಾಸಾಶನದ ಆಸರೆ ಒದಗಿಸುವುದಕ್ಕೂ ಶ್ರಮಿಸಿದ್ದರು. ಇಂತಹ ಕೆಲಸಗಳ ಮೂಲಕ ರಂಗದ ಹೊರಗೂ ಕಲಾವಿದರ ನಾಯಕರಾಗಿಯೂ ತಮ್ಮ ಗುರುತು ಮೂಡಿಸಿದರು.

(ಚಿತ್ರಕೃಪೆ: ಚಂದೋಡಿ ಬಂಗಾರೇಶ್)